ಮೈಸೂರು ಕಂಟ್ರೋಲರ್ ಸಾಹೇಬರವರ ಸರ್‌ಕ್ಯುಲರ್.

513

ನಂಬರು 107.

ತಾರೀಖು 11ನೇ ಮಾಹೆ ಏಪ್ರೆಲ್ 1889.

ಖಜಾನೆ ಡೆಪ್ಯುಟಿ ಕಮ್ಮಿಷನರವರಿಗೆ.

ಪೋಸ್ಟ್‌ಮೇಸ್ಟರ್‌ಗಳ ಅಪ್ಲಿಕೇಷನಿನಂತೆ ಖಜಾನೆಯಿಂದ ಹಣ ಏವತಿಯಾಗುವದಿಲ್ಲವೆಂದು ಬೆಂಗಳೂರು ಪೋಸ್ಟ್‌ಮೇಸ್ಟರಿಂದ ಪುಕಾರಯಾಗಿರುವ ಸಬಬು ಕಂಟ್ರೋಲರ್ ಸಾಹೇಬರು ಟ್ರೆಜರಿ ಆಫಿಸರ್‌ಗಳಿಗೆ ಕೋರಿಕೊಳ್ಳುವದೇನೆಂದರೆ, ಮಾಹೆ ಗುಜಷ್ತಾ 13ನೇ ಮುಕ್ತಂ 1712ನೇ ನಂಬರ್ ಈ ಆಫೀಸ್ ಸರ್‌ಕ್ಯುಲರ್ ಅನುಸರಿಸಿ ಆಯಾ ಪೋಸ್ಟ್‌ಮೇಸ್ಟರ್‌ಗಳ ಹೆಸರಿನಲ್ಲಿ ಇಲ್ಲಿಂದ ಕೊಟ್ಟಿರುವ ಲೆಟರ್ ಆಫ್ ಕ್ರೆಡಿಟ್‌ನಲ್ಲಿ ನಮೂದಾಗುವ ಮೊಬಲಗಿಗೆ ಮಿಂಚದಂತೆ ಅವರವರ ಅಪ್ಲಿಕೇಷನ್ ಮೇಲೆ ಖಜಾನೆಯಿಂದ ಹಣ ಕೊಡುತ್ತಾ ಬರಬೇಕೆಂದೂನ್ನೂ ಮತ್ತು ಏಕ ಕಾಲದಲ್ಲಿ ಹತ್ತು ರೂಪಾಯಿಗೆ ಕಮ್ಮಿ ಇಲ್ಲದೆ ಪೋಸ್ಟ್‌ಮೇಸ್ಟರಿಂದ ದಾಖಲಾಗುವ ಪೋಸ್ಟ್ ಆಫೀಸ್ ರೆವಿನ್ಯೂ ಮೊಬಲಗನ್ನ ಜಮಾಕಟ್ಟಿಕೊಳ್ಳುತ್ತಾ ಬರಬೇಕೆಂದು ಸಹ ಆಯಾ ತಾಲ್ಲೂಕು ಟ್ರೆಜರಿ ಆಫೀಸರಿಗೆ ಖಚಿತ ತಿಳಿಯಪಡಿಸಬೇಕು. ಹಾಗೆ ಏವತಿಯಾದ ಅಥವಾ ಜಮೆ ಬಂದ ಮೊಬಲಗನ್ನ ಬೆಂಗಳೂರು ರೆಸಿಡೆಂಟ್ ಟ್ರೆಜರಿ ಜಮಾಖರ್ಚು ಲೆಖ್ಖಕ್ಕೆ ಜಮಾಖರ್ಚು ಬರಿಸಬೇಕು.

ಎ. ರಂಗಸ್ವಾಮಯ್ಯಂಗಾರ್,
ಕಂಟ್ರೋಲರ್.

ಫಾರೆಸ್ಟ್ ಇಲಾಖೆ.

ತಾರೀಖು 3ನೇ ಏಪ್ರೆಲ್ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕಂಕಿಯಿಂದ ನಂರಕ್ಷಿಸಲ್ಪಟ್ಟ ಮತ್ತು ಇದರ ಪಿ ನಮೂದಿಸಲ್ಪಡುವ ಅಮಾನಿ ಜಂಗಲ್‌ಗಳಲ್ಲಿ ಹೋಗತಕ್ಕಂಥಾ ರಸ್ತೆಗಳು ಮಾಮೂಲ್ ಅನುಸರಿಸಿ ಸ್ನ 1889ನೇ ಇಸವಿ ಮೇ 31ನೇ ತಾರೀಖಿನ ವರಿಗೆ ಬಂದ್ ಮಾಡಲ್ಪಟ್ಟಿರುತ್ತವೆ.

1. ವೈನಾಡ್ ಜಂಗಲ್‌ನಿಂದ ಜೇಗೂರ್ ಫಾರೆಸ್ಟಿನಲ್ಲಿರುವ ಗುಂಡ್ಯಕ್ಕೆ ಹೋಗತಕ್ಕ ರಸ್ತೆ.
2. ವೈನಾಡ್ ಫಾರೆಸ್ಟಿನಿಂದ ಏನೂರು ಮಾರ್ಗುಡಿ ಫಾರೆಸ್ಟ್ ಮಾರ್ಗವಾಗಿ ಹೋಗತಕ್ಕ ರಸ್ತೆ.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇ|| ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್ ಸಬ್ ಜಡ್ಜಿಯವರ ಕೋರ್ಟ್‌ನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 317.

ಆನೇಕಲ್ ತಾಲ್ಲೂಕು ದೊಮ್ಮಸಂದ್ರದಲ್ಲಿ ಇದ್ದು ಮೃತಪಟ್ಟ ಬಾಲಂಣನವರ ಹನುಮಂತಂಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಚಿಕ್ಕ ಹನುಮಂತಂಣ, ಮೃತಪಟ್ಟ ಸದರೀ ಹನುಮಂತಂಣನಿಗೆ ಮಗನು ಆಗಬೇಕೆಂಬ ಹಕ್ಕು ದಾರೀ ಮೇಲೆ ದೊಮ್ಮಸಂದ್ರ ಸ್ಥಳದ ಚಿಕ್ಕ ಹನುಮಂತಂಣನು ದೊಮ್ಮಸಂದ್ರ ವಾಸಸ್ಥರಾಗಿ ಮೃತಪಟ್ಟ ಹನುಮಂತಂಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಅಕ್ಟು ಬೇರಿಗೆ ಸರಟಿಫಿಕೇಟ್ ಬ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚಿಕ್ಕ ಹನುಮಂತಂಣನ ಅರ್ಜಿಯನ್ನು 1889ನೇ ಇಸವಿ ಜನ್ವರಿ ತಿಂಗಳು ತಾರೀಖು 28ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹನುಮಂತಂಣನ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಏಪ್ರೆಲ್ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟ್ ಪ್ಲೆವೊಹರ್‌ನಿಂ ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರಸ್,
ಸಬ್ ಜಡ್ಜಿ.